# ಗಂಡಸಿಗೇನು ಗೊತ್ತು ಗೌರಿ ದುಃಖ?

‘ಗಂಡಸಿಗ್ಯಾಕೆ ಗೌರಿ ದುಃಖ?’ ಎಂಬುದೊಂದು ಗಾದೆ ಮಾತು. ಗಂಡಸಿಗೇನು ಗೊತ್ತು ಗೌರಿ ದುಃಖ? ಎಂಬುದು ಮತ್ತೊಂದು ಪಾಠಾಂತರ. ಹೆಂಗಸರ ದುಃಖದ ವಿಚಾರ ಗಂಡಸರಿಗ್ಯಾಕೆ ಎಂಬ ಧೋರಣೆ ಹೆಂಗಸರದ್ದು ಆಗಬಹುದು. ಗಂಡಸರದ್ದೂ ಆಗಬಹುದು. ಹೆಂಗಸರ ದುಃಖ ದುಮ್ಮಾನಗಳು ಗಂಡಸರಿಗೆ ಅರ್ಥವಾಗುವುದಿಲ್ಲವೆಂಬ ಅರ್ಥವೂ ವ್ಯಕ್ತವಾಗಿದೆ. ಈ ಗಂಡಸರಿಗೆ ಸಂಬಂಧ ಪಡದ ಹಾಗೂ ಅರ್ಥವಾಗದ ಹೆಂಗಸರ ಸಂಗತಿಗಳಲ್ಲಿ ಜೈವಿಕ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳು ಮುಖ್ಯವಾಗಿ ಕೆಲಸ ಮಾಡಿವೆ.

ಜೈವಿಕ ಸಮಸ್ಯೆಗಳು ಅವಳ ಸೃಷ್ಟಿ ಶಕ್ತಿಗೆ ಸಂಬಂಧಿಸಿದವಾಗಿವೆ. ಹೆಣ್ಣು ಹತ್ತು ವರ್ಷದವಳಾಗುತ್ತಿದ್ದಂತೆಯೇ ಅವಳು ಪುಷ್ಪವತಿಯಾಗುತ್ತಾಳೆ. (ವಯೋಮಾನ ಹೆಚ್ಚು ಕಡಿಮೆಯಾಗಬಹುದು.) ಕುಮಾರವ್ಯಾಸನ ಮಾತಿನ ಇಂಗಿತದಂತೆ ಆಗ ಅವಳು ಫಲವತಿಯಾಗಲು ಸಿದ್ಧಳಾಗುತ್ತಾಳೆ. ಆಗ ತಿಂಗಳು ತಿಂಗಳು ‘ಹೊರಗಾಗ’ ಬೇಕಾಗುತ್ತದೆ. ನಿಜವಾದ ಅರ್ಥದಲ್ಲಿ ತಿಂಗಳು ತಿಂಗಳು ಅವಳು ಫಲಿತವಾಗುವ ಸಿದ್ಧತೆಯಲ್ಲಿ ನವನವೋನ್ಮೇಶಳಾಗುತ್ತಾಳೆ. ಇದು ಪವಿತ್ರವೂ ಸೋಪಜ್ಞವೂ ಆದ ಕ್ರಿಯೆ. ಇದರಲ್ಲಿ ಮಾನವ ಸಂಕುಲದ ಮುಂದುವರಿಕೆಯ ಲಕ್ಷಣವಿದೆ; ಅದರಲ್ಲೇ ಅದರ ಅಳಿವು ಉಳಿವು ಇದೆ. ಈ ಮಹತ್ವದ ಕಾರ್ಯದ ನಿರ್ವಹಣೆ–ಜನ್ಮ ನೀಡುವುದು, ಬೆಳೆಸುವುದು, ಕಾಪಿಡುವುದು– ಇಂಥ ಗುಣಗಳು ಸ್ತ್ರೀಗೆ ಸಹಜವಾಗಿ ಜನ್ಮತಃ ದತ್ತವಾಗಿ ಬಂದಿರುತ್ತವೆ. ಇದರ ಜೊತೆಗೆ ಸಹನೆ, ತಾಳ್ಮೆ, ತ್ಯಾಗ ಗಂಡಸಿರಿಗಿಂತ ಅಧಿಕವಾಗಿರುತ್ತವೆ. ಇದು ಪ್ರಕೃತಿ ನೀಡಿರುವ ಪ್ರಕೃತಿ ಗುಣ. ಅದಕ್ಕಾಗಿಯೇ ಸ್ತ್ರೀಯನ್ನು ವಸುಧೆಯೆಂದೂ, ಧರಿತ್ರಿಯೆಂದೂ ಕರೆಯುವುದು. ಈ ಪ್ರಕ್ರಿಯೆಯಲ್ಲಿ ಅವಳು ಸೃಷ್ಟಿ ಮಾಡುವಾಗ ನಾನಾ ತರದ ದೈಹಿಕ ಮಾನಸಿಕ ನೋವುಗಳ ಮೂಲಕ ಹಾದು ಬರಬೇಕಾಗುತ್ತದೆ. ಅವಳು ‘ಹೊರಗಾಗುವ’ ಮುನ್ನ ಮೂರ್‍ನಾಕು ದಿನ, ಅನಂತರ ಮೂರ್‍ನಾಕು ದಿನ ದೈಹಿಕವಾದ ನೋವಿಗೆ ಪಕ್ಕಾಗುತ್ತಾಳೆ. ಅಂಡವನ್ನು ವಿಸರ್ಜಿಸುವ ಕ್ರಿಯೆಯಲ್ಲಿ ಮಾತ್ರ ಸಹಜವಾದ ಸಂಕಟ, ಮಾನಸಿಕ ಯಾತನೆಯನ್ನು ಅನುಭವಿಸುತ್ತಾಳೆ. ಈ ಕ್ರಿಯೆಗಳು ಅವಳ ಮೂರ್ಖ ಪ್ರಜ್ಞೆಗೆ ಅರಿವಿಗೆ ಬರದಂತೆಯೇ ಆಗುವಂತಹವು. ಈ ‘ಹೊರಗಾಗುವ’ ಕ್ರಿಯೆ ಹೆಂಗಸಿಗೆ ಒಂದೆರಡು ತಿಂಗಳು– ವರ್ಷಗಳ ನಡೆಯುವಂಥದಲ್ಲ; ನಿರಂತರವಾಗಿ ಮೂವತ್ತು– ನಲವತ್ತು ವರ್ಷಗಳು ಪ್ರತಿ ತಿಂಗಳೂ ನಡೆಯುವಂಥದ್ದು. ಅದರಲ್ಲೂ ಅದು ನಿಲ್ಲುವಾಗ ಅವಳ ದೇಹ–ಮನಸ್ಸುಗಳ ಮೇಲೆ ಆಗಾಧವಾದ ಒತ್ತಡಗಳು ಸೃಷ್ಟಿಯಾಗಿ ಕಿರಿ ಕಿರಿಯನ್ನುಂಟು ಮಾಡುತ್ತದೆ.

ಈ ದೈಹಿಕ–ಮಾನಸಿಕ ನೋವು–ದುಮ್ಮಾನಗಳು ಗಂಡಸರಿಗೆ ಆಗುವುದೇ ಇಲ್ಲ. ಗಂಡಸರಿಗೂ ‘ನಿಲ್ಲುವ’ ಪ್ರಕ್ರಿಯೆಯಿದೆಯೆಂದು ಕೆಲವು ಅಧ್ಯಯನಗಳು ಹೇಳಲೆತ್ನಿಸಿದರೂ ಸಾಬೀತಾಗಿಲ್ಲ. ಗಂಡಸು ಸೃಷ್ಟಿ ಕ್ರಿಯೆಯಲ್ಲಿ ಪಾಲುದಾರನಾದರೂ ಜವಾಬ್ದಾರಿಯ ನೆಲೆಯಲ್ಲಿ ಉಂಡಾಡಿಯಾಗಿರುತ್ತಾನೆ. ಅವನಿಗೆ ದೈಹಿಕ– ಮಾನಸಿಕ– ಜೈವಿಕ ಪರಿಣಾಮಗಳಾಗುವುದಿಲ್ಲ. ಅವನು ನಾಗರಿಕ ಸಮಾಜದಲ್ಲಿ ಬೆಳೆದು– ಕೌಟುಂಬಿಕ ಹೊಣೆಗಾರಿಕೆ, ಸಂಸ್ಕೃತಿ ಸಂಸ್ಕಾರಗಳನ್ನು ಕಲಿತ ಮೇಲೆ ಸಂಕುಲದ ಪಾಲನೆ ಪೋಷಣೆಯಲ್ಲಿ ಹೆಣ್ಣಿನ ಜೊತೆ ಪಾಲನ್ನು ಹಂಚಿಕೊಂಡಿದ್ದಾನೆ. ಆದರೆ ಗರ್ಭಧರಿಸಿ ಹೆರುವ, ಹಾಲುಣ್ಣಿಸುವ ಕ್ರಿಯೆ ಅವನಿಗೆ ಸಾಧ್ಯವಾಗುವುದೇ ಇಲ್ಲ. ಈ ನಿಟ್ಟಿನಲ್ಲಿ ಅವನು ಸದಾ ಅನನುಭವಿ; ಹೆಂಗಸಿಗೆ ಎರಡನೆಯವನು. ಆಧುನಿಕ ಕಾಲದಲ್ಲು ಅನೇಕ ಕುಟುಂಬಗಳಲ್ಲಿ ಸಂಕುಲದ ಸಾಕಾಣಿಕೆ ಹೆಣ್ಣಿನದೇ ಆಗಿದೆ. ಇತ್ತೀಚಿನ ‘ಏಕ ಪೋಷಕತ್ವ’ದಲ್ಲಿ ಗಂಡು ಇರುವುದೇ ಇಲ್ಲ. ತಾಯ್ತನ ತನ್ನ ಹಕ್ಕೆಂದು ಮಗು ಮಾಡಿಕೊಂಡು ಅದನ್ನು ಬೆಳೆಸುವ ಸ್ತ್ರೀಯರ ಸಂಖ್ಯೆ ಅಧಿಕವಾಗುತ್ತಿದೆ. ಈ ಸಾಧ್ಯತೆ ಪುರುಷನಿಂದ ಆಗುವುದಿಲ್ಲ. ಅವನು ಸಂತಾನಕ್ಕೆ ಪರಾವಲಂಬಿಯೇ ಆಗಿರುತ್ತಾನೆ. ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಸ್ತ್ರೀ ಹಾದುಬರುವ ದೈಹಿಕ– ಮಾನಸಿಕ ತಲ್ಲಣಗಳು ಪುರುಷನಿಗೆ ಅನ್ವಯವಾಗುವುದಿಲ್ಲ. ಅವನು ಅದರ ಅನುಭವವನ್ನು ಓದಿ, ಕೇಳಿ ತಿಳಿಯಬೇಕಷ್ಟೆ!

ಸಂತಾನ ಕ್ರಿಯೆಯ ಬಹುಮುಖ್ಯ ಸಾಧನವಾದ ಲೈಂಗಿಕತೆಯ ವಿಚಾರದಲ್ಲು ಪುರುಷನಿಗಿರುವ ಬಿಡುಬೀಸು ಸ್ತ್ರೀಗಿರುವುದಿಲ್ಲ. ಅದು ಸಂಕುಲ ಮುಂದುವರಿಕೆಯ ಅಂಗವಾಗಿ ಮಾತ್ರ ಇರದೆ, ಮಾನಸಿಕ ಆಸೆಯ ಈಡೇರಿಕೆಯ ಸಾಧನವೂ ಆಗಿರುವುದರಿಂದ– ಪುರುಷ ಈ ನಿಟ್ಟಿನಲ್ಲಿ ಆಕ್ರಮಣ ಮಾಡಲೆತ್ನಿಸುತ್ತಾನೆ. ಅನೇಕವೇಳೆ ಯಶಸ್ವಿಯೂ ಆಗುತ್ತಾನೆ. ಈ ಲೈಂಗಿಕ ಶೋಷಣೆಯ ಪರಿಣಾಮ ಸ್ತ್ರೀಯ ಮೇಲೆ ಆಗುತ್ತದೆ. ಆಗ ಅವಳು ಕೌಟುಂಬಿಕ– ಸಾಮಾಜಿಕ ಹಿಂಸೆಗೆ, ಅವಮಾನಕ್ಕೆ ಗುರಿಯಾಗುತ್ತಾಳೆ. ಏಕೆಂದರೆ ಅವಳು ತಾಯಾಗುವ ಲಕ್ಷಣವನ್ನು ಅವಿತಿಟ್ಟುಕೊಳ್ಳಲಾಗುವುದಿಲ್ಲ. ಪುರುಷ ಮಾತ್ರ ಹಾರಿಹೋಗಿರುತ್ತಾನೆ. ಅಪಮಾನ ಮಾತ್ರ ಇವಳದ್ದೇ ಆಗಿರುತ್ತದೆ. ಹೌದಲ್ಲವೆ? ಗಂಡಸಿಗೇನು ಗೊತ್ತು ಗೌರಿ ದುಃಖ?

■ ಶಿಕಾಕು

## ಮಾತೇ ಮುತ್ತು

★ ಹೃತ್ಪೂರ್ವಕವಾಗಿ ಪ್ರೀತಿಸದಿದ್ದರೂ, ಒಳ್ಳೆಯ ಹೆಂಡತಿ ಆಗಬಹುದು!

–ರವೀಂದ್ರನಾಥ ಠಾಕೂರ್

★ ಸಹಾನುಭೂತಿ ಉಳ್ಳ ಹೆಂಡತಿ ಮನುಷ್ಯನ ಶ್ರೇಷ್ಠ ಸಂಪತ್ತು.

–ಯೂರಿಪಿಡೀಸ್

★ ಗಂಡನಿಗೆ ಹಿತವನ್ನು ಬಯಸುವಂತಹ ಹೆಂಡತಿಯನ್ನು ಪುಣ್ಯಶಾಲಿ ಮಾತ್ರ ಪಡೆಯುತ್ತಾನೆ.

–ಭರ್ತೃಹರಿ

★ ಸುಂದರಿಯಾದ ಹೆಂಡತಿ ಪ್ರಪಂಚಕ್ಕೆ ಸೇರಿದವಳು, ಕುರೂಪಿ ಹೆಂಡತಿ ನಿನ್ನವಳು.

–ಗಾದೆ

★ ಸಾವಿರ ಕುದುರೆ ಸರದಾರನಾದರೂ, ಮನೆ ಹೆಂಡತಿಯ ಗುಲಾಮ.

–ಗಾದೆ

★ ಎಷ್ಟು ಗಟ್ಟಿ ಮನುಷ್ಯನೇ ಇರಲಿ, ಹೊಗಳಿಕೆಗೆ ಕಿವಿಗೊಟ್ಟನೆಂದರೆ ಬಲೆಗೆ ಬೀಳುತ್ತಾನೆ.

–ಶಿವರಾಮ ಕಾರಂತ

★ ಸಾಮಾನ್ಯವಾಗಿ ನಾವು ಇತರರನ್ನು ಹೊಗಳುವುದು, ಇತರರು ನಮ್ಮನ್ನು ಹೊಗಳಲಿ ಎಂದೇ.

–ಲಾ ರೋಚೆ ಫಕಾಲ್ಡ್

★ ಎಲ್ಲರನ್ನೂ ಹೊಗಳುವವನು, ಯಾರನ್ನೂ ಹೊಗಳುವುದಿಲ್ಲ.

–ಜೇಮ್ಸ್ ಬಾಸ್ವೆಲ್

★ ಒಂದಲ್ಲ ಒಂದು ಸಮಯದಲ್ಲಿ ನಮ್ಮೆಲ್ಲರಿಗೂ ಹೊಗಳಿಕೆ ಬೇಕು.

–ಜಾನ್ಸನ್ ಸ್ಪೆನ್ಸರ್

★ ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಆರ್ಥಿಕ ಅಂತಸ್ತು ಕೆಳಗಿಳಿದಷ್ಟೂ, ಆ ವರ್ಗಕ್ಕೆ ರಾಜಕೀಯ ರಕ್ಷಣೆ ಪಡೆಯುವ ಅಗತ್ಯ ಹೆಚ್ಚಾಗುತ್ತದೆ.

–ಬಿ.ಆರ್.ಅಂಬೇಡ್ಕರ್

★ ಒಲಿಂಪಿಕ್ಸ್ ಇಲ್ಲವೆ ಇನ್ನಿತರ ಅಂತರ್‍ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತಕ್ಕೆ ಗೌರವ– ಬೆಲೆ ತಂದುಕೊಡುವ ಆಟವಲ್ಲ ಕ್ರಿಕೆಟ್. ಪಾಳೇಗಾರಿಕೆ ಕಾಲಕ್ಕೆ ಸೇರಿದ ಆಟ ಇದು. ಫುಟ್‌ಬಾಲ್ ಇಲ್ಲವೇ ಜಿಮ್ನಾಸ್ಟಿಕ್‌ಗಳಂತೆ ಶರೀರ ಸಂವರ್ಧನಕ್ಕೆ ನೆರವಾಗುವಂತಹ ಆಟವೂ ಇದಲ್ಲ.

–ರಾಮ ಮನೋಹರ ಲೋಹಿಯಾ

★ ಹಳೆಯದೆಲ್ಲವೂ ಪೂಜ್ಯವಲ್ಲ, ಹೊಸದೆಲ್ಲವೂ ತ್ಯಾಜ್ಯವಲ್ಲ. ಹಾಗೆಯೇ ಹಳೆಯದೆಲ್ಲವೂ ತ್ಯಾಜ್ಯವಲ್ಲ, ಹೊಸದೆಲ್ಲವೂ ಪೂಜ್ಯವಲ್ಲ. ಯಾವುದು ತ್ಯಾಜ್ಯ, ಯಾವುದು ಪೂಜ್ಯ– ಎನ್ನುವುದಕ್ಕೆ ತಿಳಿವಳಿಕೆ ಬೇಕು; ವಿಚಾರ ಬೇಕು; ಚಿಂತನೆ ಬೇಕು; ಅನುಭವ ಬೇಕು.

–ಹಾ.ಮಾ.ನಾಯಕ

★ ಕವಿಗಳು, ಕಲಾವಿದರು ಈ ಪ್ರಪಂಚದ ಅಘೋಷಿತ ಶಾಸಕರು!

–ಪಿ.ಬಿ.ಷೆಲ್ಲಿ